ಬೀಳಗಿ ತಾಲ್ಲೂಕಿನಲ್ಲಿ ಉರ್ದು ಮಾಧ್ಯಮಿಕ ಶಾಲೆಯನ್ನು ತೆರೆಯುವುದು.

762 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) :ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀಳಗಿ ತಾಲ್ಲೂಕಿನಲ್ಲಿ ಉರ್ದು ಮಾಧ್ಯಮಿಕ ಶಾಲೆಗಳು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಒಂದು ಉರ್ದು ಮಾಧ್ಯಮಿಕ ಶಾಲೆಯನ್ನು ತೆರೆಯಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಉರ್ದು ಪ್ರೌಢಶಾಲೆಯ ಅಗತ್ಯತೆಯ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಾಹನಗಳ ಹೊಗೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ

763 - ಶ್ರೀ ಜೆ.ಟಿ. ಪಾಟೀಲ್(ಬೀಳಗಿ) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರ ಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಮುಖ್ಯ ಪಟ್ಟಣಗಳಲ್ಲಿ ವಾಹನಗಳ ಹೊಗೆಯಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ, ಬಂದಿದ್ದಲ್ಲಿ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?*

ಆ) *ದೆಹಲಿ ಮತ್ತು ಮುಂಬಯಿಗಳ ಮಾದರಿಯಲ್ಲಿ ತಂಬಾಕು ಸೇವಿಸಿ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ನಿಷೇದಿಸಲು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿದಂತಹವರ ವಿರುದ್ಧ ಶಿಕ್ಷೆ ನೀಡುವಂತಹ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಆಲೋಚಿಸುವುದೆ?*

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ ಜೀವಿಶಾಸ್ತ್ರ , ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):

ಅ) ಬಂದಿದೆ, ವಾಯುಮಾಲಿನ್ಯವನ್ನು ತಡೆಯಲು ವಾಹನಗಳ ಇಂಧನ ಬಳಕೆಯಲ್ಲಿ ಸುಧಾರಣೆಯಾಗಬೇಕಿದ್ದು, ಮತ್ತು ಲೀಡ್‌ಫ್ರೀ ಪೆಟ್ರೋಲ್ ಒದಗಿಸುವ ಹೊಣೆ ಕೇಂದ್ರ ಸರ್ಕಾರದ್ದಾಗಿದೆ. ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ತಡೆಯುವ ಹೊಣೆಗಾರಿಕೆ ಸಾರಿಗೆ ಇಲಾಖೆಯದ್ದಾಗಿದ್ದು, ಈ ಬಗ್ಗೆ ತೀವ್ರ ಕ್ರಮಕೈಗೊಳ್ಳಲು ಸಾರಿಗೆ ಇಲಾಖೆಗೆ ಸೂಚಿಸಲಾಗಿದೆ. ವಾಹನಗಳನ್ನು ಪರೀಕ್ಷಿಸಲು